ಕವಿತೆ



ಎಚ್‌.ಆರ್‌. ಸುಜಾತಾ

ಕಲೆ: ಕೌಶಿಕ್




# ಕೊರೆದ ಕಡ್ಡಿ ದೂರ ದೂರ

ಅಳುವ ಕಡಲ ತಡಿಯಲ್ಲಿ ದೇವರು ವಿರಾಮದಲ್ಲಿ
ಮರಳ ತಟ್ಟಿ ಜೀವವಿಟ್ಟು ಹಣೆಬರಹ ಒರೆಯುತ್ತಾನೆ
ಬರೆದದ್ದನ್ನು ಅಳಿಸಿಹಾಕುತ್ತದೆ ಅಲೆಯೊಂದು
ಮಕ್ಕಳ ಕೈ ತಟ್ಟಿ ತಟ್ಟಿ ಕಟ್ಟಿದ ಕಪ್ಪೆಗೂಡ ಕೆಡವುತ್ತದೆ

ದೇವರು ಮತ್ತೊಮ್ಮೆ ಕೊರೆಯಲಾರ
ಅದೃಷ್ಟರೇಖೆಗಳ
ಗಾಳಿ ಬಂದೆಡೆ ತೂರಿ ಹೋಗುತ್ತಿದೆ
ಕೊರೆದ ಕಡ್ಡಿ ಅದೋ ಅಲ್ಲಿ ದೂರ...

ಆದರೂ
ದಿಕ್ಕೆಟ್ಟ ತನ್ನ ಬೊಂಬೆಗೆ ಸೂರ್ಯನ ಹೊಳಪ ತೋರಿ
ಮುಗುಳ್ನಗುವೊಂದ ಕರುಣಿಸುತ್ತಾನೆ
ದಿನದಿನವೂ ಬೆಳಗುವ ಆಶಾಕಿರಣವೊಂದನ್ನು



# ಬೆಟ್ಟಸಾಲಿನ ಕೋಡುಗಳು

ತುಟಿಯ ಮೇಲೆ ಅರಳು ಹುರಿಯಿತು ನಗು
ಹಲ್ಲುಕಟ್ಟೆಗೆ ಸಿಕ್ಕಿ ಚೀಗುಟ್ಟಿತು ನಾಲಿಗೆ
ಎದೆಯ ಕಿಟಕಿ ತೆರೆದೆ

ಬಾಲವುದುರಿಸಿದ ಹಲ್ಲಿ ಬದುಕಲು ಓಡಿತು
ಗೋಡೆ ಮೇಲೆ ಥರಗುಡುವ ರೆಕ್ಕೆ–
ಹುಳದ ಮೇಲೆ ಅದರ ಕಣ್ಣು

